(67)

**ಮಾನ್ಯ ವಿಧಾನಪರಿಷತ್ ಸದಸ್ಯರಾದ ಶ್ರೀ ಚಿದಾನಂದ್ ಎಂ ಗೌಡ ಇವರು ನಿಯಮ-60 ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಉತ್ತರ.**

**ಪ್ರಶ್ನೆ:** ರಾಜ್ಯ ಸಾರಿಗೆ ಸಂಸ್ಥೆ ದೇಶದಲ್ಲೇ ಮಾದರಿ ಎನ್ನುವ ರೀತಿಯಲ್ಲಿ ಈ ಹಿಂದಿನಿಂದಲೂ ಕಾರ್ಯ ನಿರ್ವಹಿಸುತ್ತಿದೆ, ಈ ಕೀರ್ತಿಗೆ ಅದರ ನೌಕರರೇ ಕಾರಣ ಎಂದರೆ ತಪ್ಪಲ್ಲ. ಆದರೆ ಇಂದು ಶಕ್ತಿ ಯೋಜನೆ ಜಾರಿಯಾದ ನಂತರ ಅವರ ಕೆಲಸ, ಜವಾಬ್ದಾರಿ ಇನ್ನಷ್ಟು ಹೆಚ್ಚಾಗಿದೆ. ನೌಕರರ ಕೆಲಸ ಮಾತ್ರ ಹೆಚ್ಚಾಗಿದ್ದು, ಅವರ ವೇತನ ಮತ್ತು ಭತ್ಯೆಗಳು ಮಾತ್ರ ಹೆಚ್ಚಾಗಿಲ್ಲ. ಬಾಕಿ ಪಾವತಿ ಬಿಡುಗಡೆ, ಮೂಲವೇತನ, ಭತ್ಯೆಗಳ ಹೆಚ್ಚಳ ಮಾಡಬೇಕು, ಪ್ರತಿ ತಿಂಗಳು 2000 ರೂ ವೈದ್ಯಕೀಯ ಚಿಕಿತ್ಸಾ ವೆಚ್ಚ ನೀಡಬೇಕು, ಬಸ್ ಘಟಕಗಳಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು, ಹೆಚ್ಚುವರಿ ಕೆಲಸದ ಅವಧಿಗೆ ಓಟಿ ನೀಡಬೇಕು, ಶಕ್ತಿ ಯೋಜನೆಯಿಂದ ಆಗುತ್ತಿರುವ ಶಿಕ್ಷೆ ಮತ್ತು ಕಿರುಕುಳ ಸಮಸ್ಯೆ ಪರಿಹರಿಸಬೇಕು, ನೌಕರರ ಮುಂಬಡ್ತಿಗೆ ಕ್ರಮಕೈಗೊಳ್ಳಬೇಕು ಎಂಬ ಬೇಡಿಕೆಗಳ ಈಡೇರಿಕೆಗಾಗಿ ರಾಜ್ಯ ಸಾರಿಗೆ ನೌಕರರು ಡಿಸೆಂಬರ್-31 ರಿಂದ ಅನಿರ್ಧಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿದ್ದಾರೆ. ಇವರ ಮುಷ್ಕರದಿಂದ ಹೊಸ ವರ್ಷದ ಮುಂದಿನ ದಿನದಂದು ಲಕ್ಷಾಂತರ ಜನರಿಗೆ ತೊಂದರೆ ಆಗುವ ಸಾಧ್ಯತೆ ಇದೆ. ಆದ್ದರಿಂದ ಇವರ ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸಿ ಸಾರ್ವಜನಿಕರಿಗೆ ಉಂಟಾಗಲಿರುವ ತೊಂದರೆಯನ್ನು ತಪ್ಪಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಈ ವಿಷಯದ ಕುರಿತು ಈ ಸಂಜೆ ಪತ್ರಿಕೆಯಲ್ಲಿ ಪ್ರಕಟವಾದ ವರದಿಯ ನಕಲನ್ನು ಲಗತ್ತಿಸಿರುತ್ತೇನೆ. ಈ ಸಾರ್ವಜನಿಕ ಮಹತ್ವದ ವಿಷಯವನ್ನು ಸದನದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

**ಉತ್ತರ:**

**2023-24ರ ಪೂರ್ವದ 4 ವರ್ಷಗಳಲ್ಲಿ ಹೊಸ ಬಸ್ಸುಗಳನ್ನು ಖರೀದಿಸಿರಲಿಲ್ಲ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ 2023-24ರ ಪೂರ್ವದ 07 ವರ್ಷಗಳಿಂದ ಮತ್ತು ಉಳಿದ ಸಾರಿಗೆ ಸಂಸ್ಥೆಗಳಲ್ಲಿ 2023-24ರ ಪೂರ್ವದ 04 ವರ್ಷಗಳಿಂದ ಸಿಬ್ಬಂದಿ ನೇಮಕಾತಿ ಆಗಿರಲಿಲ್ಲ. ಅಲ್ಲದೆ ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ 2023-24ನೇ ಸಾಲಿನ ಪೂರ್ವದ ಆರ್ಥಿಕ ವರ್ಷಗಳಲ್ಲಿ ಆಗಾಧವಾದ ಸಾಲದ ಹೊರೆಯಿತ್ತು ಹಾಗೂ ಸಾರಿಗೆ ನಿಗಮಗಳು ಇಂಧನ ಕಂಪನಿಗಳಿಗೆ ಇಂಧನದ ವೆಚ್ಚವನ್ನು ಭವಿಷ್ಯ ನಿಧಿ ನ್ಯಾಸ ಮಂಡಳಿಗೆ ಬಾಕಿ ಮೊತ್ತ, ನಿವೃತ್ತ ನೌಕರರಿಗೆ ಉಪಧನ, ಬ್ಯಾಂಕ್ ಸಾಲ ಮತ್ತು ಸರಬರಾಜುದಾರರ/ಇತರೆ ಬಿಲ್ಲುಗಳನ್ನು ಪಾವತಿಸದೇ ಬಾಕಿಯಿರಿಸಿದ್ದರಿಂದ ನಿಗಮಗಳ ಮೇಲೆ ಆರ್ಥಿಕ ಹೊರೆ ಹೆಚ್ಚಾಗಿತ್ತು. ಹಾಗಾಗಿ, ಹೊಸ ಬಸ್ಸುಗಳನ್ನು ಖರೀದಿಸಲು ಮತ್ತು ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲು ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢಿಕರಿಸಿಕೊಳ್ಳಬೇಕಾಗಿತ್ತು.**

ರಾಜ್ಯ ರಸ್ತೆ ಸಾರಿಗೆ ನಿಗಮಗಳು ರಸ್ತೆ ಸಾರಿಗೆ ನಿಗಮಗಳ ಕಾಯ್ದೆ-1950 **(The Road Transport Corporation Act,1950)** ರಡಿ ಅಸ್ತಿತ್ವಕ್ಕೆ ಬಂದಿರುವ ಸರ್ಕಾರಿ ಸ್ವಾಮ್ಯದ ಸ್ವಾಯತ್ತ ಸಂಸ್ಥೆಗಳಾಗಿರುತ್ತದೆ. ರಸ್ತೆ ಸಾರಿಗೆ ನಿಗಮಗಳ ನಿರ್ವಹಣೆ ಮತ್ತು ಸಿಬ್ಬಂದಿಗಳ ವೇತನ ಹಾಗೂ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ನಿಗಮಗಳು ತನ್ನ ಆಂತರಿಕ ಮೂಲಗಳಿಂದಲೇ ಭರಿಸಬೇಕಾಗಿರುತ್ತದೆ.

ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ವೇತನವನ್ನು ಕೈಗಾರಿಕಾ ಒಪ್ಪಂದದನ್ವಯ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಒಪ್ಪಂದವನ್ನು (ಅಗ್ರಿಮೆಂಟ್) ಪರಿಷ್ಕರಿಸುವ ಪದ್ಧತಿ

ಜಾರಿಯಲ್ಲಿದ್ದು, ನಿಗಮಗಳ ಆರ್ಥಿಕ ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಂಡು ಸರ್ಕಾರದ ಅನುಮೋದನೆ ಪಡೆದು ವೇತನ ಪರಿಷ್ಕರಣೆಯನ್ನು ಮಾಡುವ ಪದ್ಧತಿ ಜಾರಿಯಲ್ಲಿರುತ್ತದೆ.

ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳ ಅಧಿಕಾರಿ/ ನೌಕರರಿಗೆ ದಿನಾಂಕ:31.12.2019ರಂದು ಪಡೆಯುತ್ತಿದ್ದ ಮೂಲವೇತನವನ್ನು ಶೇ.15ರಷ್ಟು ಹೆಚ್ಚಿಸಿ ಅದರಂತೆ ವೇತನ ಶ್ರೇಣಿಗಳನ್ನು ಪರಿಷ್ಕರಿಸಿ ದಿನಾಂಕ:01.03.2023ರಿಂದ ಜಾರಿಗೊಳಿಸಲಾಗಿತ್ತು. ಆದರೆ, ಯಾವುದೇ ಬಾಕಿಯನ್ನು ಪಾವತಿಸಿರಲಿಲ್ಲ. ಅಲ್ಲದೆ, ಹೆಚ್ಚಿಸಿದ ವೇತನಕ್ಕೆ ಯಾವುದೇ ಅನುದಾನವನ್ನು ಕಲ್ಪಿಸಿರಲಿಲ್ಲ. ಏಕ ಸದಸ್ಯ ಸಮಿತಿಗೆ ಯಾವ ದಿನಾಂಕ ದಿಂದ ವೇತನ ಮತ್ತಿತ್ತರ ಬಾಕಿಗಳನ್ನು ಪಾವತಿಸಬೇಕು ಎಂಬ ಬಗ್ಗೆ ಪರಿಶೀಲಿಸಿ ಶಿಫಾರಸ್ಸು ಮಾಡಲು ತಿಳಿಸಲಾಗಿತ್ತೇ ಹೊರತು ಆರ್ಥಿಕ ಪರಿಣಾಮಗಳಿಗೆ ಹಣವನ್ನು ಕ್ರೋಢೀಕರಿಸಿಕೊಳ್ಳುವ ಬಗ್ಗೆ ನಿರ್ಧಿಷ್ಟ ಮಾನ ದಂಡಗಳನ್ನು ತಿಳಿಸಿರಲಿಲ್ಲ. ಬದಲಾಗಿ, ಸಾರಿಗೆ ನಿಗಮಗಳ ನೌಕರರ ವೇತನ ಪರಿಷ್ಕರಣೆಯಿಂದ ಉಂಟಾಗುವ ವೆಚ್ಚವನ್ನು ನಿಗಮಗಳ ಆಂತರಿಕ ಸಂಪನ್ಮೂಲಗಳಿಂದಲೇ ಭರಿಸುವಂತೆಯು ಸರ್ಕಾರದಿಂದ ಯಾವುದೇ ಆರ್ಥಿಕ ಸಹಾಯವನ್ನು ನಿರೀಕ್ಷಿಸಬಾರದೆಂಬ ಷರತ್ತನ್ನು ವಿಧಿಸಲಾಗಿತ್ತು. ಇದರಿಂದ, ನಿಗಮಗಳ ನೌಕರರ ಸಮಸ್ಯೆಯು ಪರಿಹಾರವಾಗಿರಲಿಲ್ಲ ಮತ್ತು ನಿಗಮಗಳಿಗೆ ತೀವ್ರ ಆರ್ಥಿಕ ಹಿನ್ನಡೆಯನ್ನು ಸಹ ಉಂಟುಮಾಡಿತ್ತು.

ಎಲ್ಲಾ ಘಟಕಗಳಲ್ಲಿ ಸಿಬ್ಬಂದಿಗಳಿಗೆ ವಿಶ್ರಾಂತಿ ಕೊಠಡಿ, ಶೌಚಾಲಯ ಮತ್ತು ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ. ಕ.ರಾ.ರ.ಸಾ.ನಿಗಮ ಹಾಗೂ ಕ.ಕ.ರ.ಸಾ.ನಿಗಮಗಳಲ್ಲಿ ಸೇವೆಯಲ್ಲಿರುವಾಗ ಮರಣ ಹೊಂದಿದ ನೌಕರರ ಅವಲಂಬಿತರಿಗೆ ರೂ.10.00 ಲಕ್ಷಗಳ ಮೊತ್ತದ ಪರಿಹಾರ, ವಾ.ಕ.ರ.ಸಾ.ನಿಗಮದಲ್ಲಿ ರೂ.5.00 ಲಕ್ಷಗಳ ಮೊತ್ತದ ಪರಿಹಾರ ಹಾಗೂ ಬೆಂ.ಮ.ಸಾ.ಸಂಸ್ಥೆಯಲ್ಲಿ ರೂ.3.00 ಲಕ್ಷಗಳ ಮೊತ್ತದ ಪರಿಹಾರ ನೀಡುವ ಮಹತ್ವದ ಯೋಜನೆ ಜಾರಿಯಲ್ಲಿರುತ್ತದೆ. ಅಲ್ಲದೇ, ಅಪಘಾತ ಪರಿಹಾರ ಯೋಜನೆಯನ್ನು (ಕರ್ತವ್ಯನಿರತ ಮತ್ತು ಖಾಸಗೀ ಅಪಘಾತ ಸೇರಿದಂತೆ) ಜಾರಿಗೊಳಿಸಿ ಅಪಘಾತದಿಂದ ಮೃತಪಟ್ಟ ನೌಕರರ ಅವಲಂಬಿತರಿಗೆ ರೂ.1.00 ಕೋಟಿಗಳ ಪರಿಹಾರ ಮೊತ್ತವನ್ನು ವಿತರಿಸಲಾಗುತ್ತಿದೆ.

ಕ.ರಾ.ರ.ಸಾ.ನಿಗಮದಲ್ಲಿ ಸಿಬ್ಬಂದಿಗಳ ಮಕ್ಕಳಿಗೆ ವಿದ್ಯಾ ಸಹಾಯನಿಧಿ ಅಡಿಯಲ್ಲಿ ಈ ಹಿಂದೆ ನೀಡುತ್ತಿರುವ ವಿದಾರ್ಥಿ ವೇತನವನ್ನು ಪರಿಷ್ಕರಿಸಿ ನೂತನ 'ಸಾರಿಗೆ ವಿದ್ಯಾಚೇತನ' ಯೋಜನೆ ಜಾರಿಗೊಳಿಸಿದೆ. ಈ ಯೋಜನೆಯಲ್ಲಿ ನೂತನವಾಗಿ ಪಿಯುಸಿ, ಪದವಿ, ಪಿ.ಹೆಚ್.ಡಿ ಹಾಗೂ ವಿದೇಶದಲ್ಲಿ ಅಧ್ಯಯನ ಮಾಡುತ್ತಿರುವ ಪದವಿ ವ್ಯಾಸಂಗವನ್ನು ಹೊಸದಾಗಿ ಸೇರ್ಪಡೆಗೊಳಿಸಿದೆ. ಪಾರದರ್ಶಕತೆ ಮತ್ತು ಸರಳೀಕರಣ ವ್ಯವಸ್ಥೆ ಜಾರಿಗೊಳಿಸುವ ನಿಟ್ಟಿನಲ್ಲಿ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಸಲ್ಲಿಸುವ ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ, ಸಿಬ್ಬಂದಿ ಹಾಗೂ ಅವಲಂಬಿತ ಕುಟುಂಬ ಸದಸ್ಯರಿಗೆ ಉಚಿತ ವೈದ್ಯಕೀಯ ವ್ಯವಸ್ಥೆ ಜಾರಿಗೆ ತರಲು ಕ್ರಮ ವಹಿಸಲಾಗುತ್ತಿದ್ದು, ಇತರ ನಿಗಮಗಳಿಗೆ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದು.

ಉಳಿದಂತೆ ನಿಗಮದ ನೌಕರರುಗಳಿಗೆ ರಾಜ್ಯ ಸರ್ಕಾರದ ಮಾದರಿಯಲ್ಲಿಯೇ ತುಟ್ಟಿಭತ್ಯೆ, ಮನೆಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ, ರಜಾ ಸೌಲಭ್ಯಗಳು, ವೈದ್ಯಕೀಯ ಮರುಪಾವತಿ ಸೌಲಭ್ಯ, ಕಾಲಕಾಲಕ್ಕೆ ನಿಯಮಾನುಸಾರ ಮುಂಬಡ್ತಿ, ಇತ್ಯಾದಿ ಎಲ್ಲಾ ಸೌಲಭ್ಯಗಳನ್ನು ಈಗಾಗಲೇ ನೀಡಲಾಗುತ್ತಿದೆ. ಹೆಚ್ಚುವರಿ ಕೆಲಸದ ಅವಧಿಗೆ ಹೆಚ್ಚುವರಿ ವೇತನ ಭತ್ಯೆ (OT) ನೀಡಲಾಗುತ್ತಿದೆ. ವಿವರಗಳನ್ನು **ಅನುಬಂಧ** ದಲ್ಲಿ ನೀಡಲಾಗಿದೆ.

ಪ್ರಸ್ತುತ ನೌಕರರ ಬೇಡಿಕೆಗಳ ಈಡೇರಿಕೆಗಾಗಿ ರಾಜ್ಯ ಸಾರಿಗೆ ನೌಕರರು ಡಿಸೆಂಬರ್-31 ರಿಂದ ಅನಿರ್ಧಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿದ್ದಾರೆ. ಜಂಟಿ ಕ್ರಿಯಾ ಸಮಿತಿಯವರ ಬೇಡಿಕೆಗಳ ಸಂಬಂಧ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:09.10.2024 ರಂದು ಜಂಟಿ ಕ್ರಿಯಾ ಸಮಿತಿಯ ಪದಾಧಿಕಾರಿಗಳ ಜೊತೆಗೆ ಸಭೆಯನ್ನು ನಡೆಸಿ, ಅಂತರ ನಿಗಮ ವರ್ಗಾವಣೆ, ನಗದು ರಹಿತ ವೈದ್ಯಕೀಯ ಚಿಕಿತ್ಸಾ ಯೋಜನೆ ಹಾಗೂ ನಿವೃತ್ತಿ ನೌಕರರಿಗೆ 2020 ವೇತನ ಪರಿಷ್ಕರಣೆ ವ್ಯತ್ಯಾಸದ ಮೊತ್ತವನ್ನು ಬಿಡುಗಡೆ ಮಾಡಲು ತೀರ್ಮಾನಿಸಿ, ಕ್ರಮ ಜಾರಿಯಲ್ಲಿದೆ.

ನಿಗಮಗಳು ಪ್ರಸ್ತುತ ಎದುರಿಸುತ್ತಿರುವ ಆರ್ಥಿಕ ಸಂಕಷ್ಟದಿಂದ ಹೊರಬರಲು ಹಾಗೂ ಶಾಸನಬದ್ಧ ಪಾವತಿಯಾದ ಭವಿಷ್ಯ ನಿಧಿ ಹಾಗೂ ಇಂಧನದ ಬಾಕಿ ಮೊತ್ತವನ್ನು ಮರುಪಾವತಿಸಲು ಪಡೆಯುವ ಸಾಲಕ್ಕೆ ತಗಲುವ ಅಸಲು ಮತ್ತು ಬಡ್ಡಿ ಮೊತ್ತವನ್ನು ಸರ್ಕಾರವು ಭರಿಸಲು ಕೋರಿ, ಸಂಸ್ಥೆಗಳಿಗೆ ಸರ್ಕಾರದ ಸರ್ವೀಸ್ ಲೋನ್ (Government Service Loan) ಅನ್ನು ಪಡೆಯಲು ಅನುಮತಿ ನೀಡುವಂತೆ ಕೋರಿರುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಮುಂದುವರೆದು, ದಿನಾಂಕ:01.01.2020 ರಿಂದ 28.02.2023ರ ಅವಧಿಯಲ್ಲಿ ಸೇವಾವಿಮುಕ್ತಿ ಹೊಂದಿದ ಅಧಿಕಾರಿ ಮತ್ತು ನೌಕರರಿಗೆ ಪಾವತಿಸಬೇಕಾದ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಉಪಧನ ಹಾಗೂ ಗಳಿಕೆ ರಜೆ ನಗದೀಕರಣ ಪಾವತಿಗಾಗಿ ರೂ.224.05 ಕೋಟಿಗಳ ವಿಶೇಷ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ.

ನೌಕರರ ಸಂಘಟನೆಗಳ ಪ್ರಮುಖ ಬೇಡಿಕೆಗಳಾದ 38 ತಿಂಗಳ ಹಿಂಬಾಕಿ ಪಾವತಿ, 2024 ರ ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ ನೌಕರರ ಸಂಘಟನೆಗಳೊಂದಿಗೆ ನಿರಂತರ ಮಾತುಕತೆ ನಡೆಸಲಾಗುತ್ತಿದೆ. ಸಂಸ್ಥೆಯ ಆರ್ಥಿಕ ಪರಿಸ್ಥಿತಿ ಕುರಿತು ಹಾಗೂ ಅನಗತ್ಯ ಮುಷ್ಕರದಿಂದ ಲಕ್ಷಾಂತರ ಜನರಿಗೆ ತೊಂದರೆ ಆಗುವ ಬಗ್ಗೆ ಈಗಾಗಲೇ ಕಾರ್ಮಿಕ ಸಂಘಟನೆಗಳಿಗೆ ಮನವರಿಕೆ ಮಾಡಿಕೊಡಲಾಗಿದೆ. ಈ ಕುರಿತು ಈಗಾಗಲೇ ಕಾರ್ಮಿಕ ಆಯುಕ್ತರು ಸಹ ಕಾರ್ಮಿಕ ಸಂಘಟನೆಗಳ ಜೊತೆಗೆ ರಾಜೀಸಂಧಾನ ನಡೆಸಲು ಸಭೆಯನ್ನು ದಿನಾಂಕ:27.12.2024 ರಂದು 11.00 ಗಂಟೆಗೆ ಸಮಯ ನಿಗದಿಪಡಿಸಿರುತ್ತಾರೆ. ನೌಕರರ ಸಮಸ್ಯೆಗಳನ್ನು ಬಗಹರಿಸಲು ಹಾಗೂ ಮುಷ್ಕರವನ್ನು ತಪ್ಪಿಸಲು ಆದ್ಯತೆ ನೀಡಿ ಪ್ರಾಮಾಣಿಕ ಪ್ರಯತ್ನ ನಡೆಸಲಾಗುವುದು.

**ಟಿಡಿ 260 ಟಿಸಿಕ್ಯೂ 2024**

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು

| ರಾಜ್ಯ ಸರ್ಕಾರ ಮತ್ತು ಕರಾರಸಾನಿಗಮದಲ್ಲಿ ಇರುವ ಸಾಮಾನ್ಯ ಸೌಲಭ್ಯಗಳು | | |
|---|---|---|
| 1 | ಮನೆ ಬಾಡಿಗೆ ಭತ್ಯೆ | ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ. |
| 2 | ತುಟ್ಟಿ ಭತ್ಯೆ | ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ. |
| 3 | ನಗರ ಪರಿಹಾರ ಭತ್ಯೆ | ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ. |
| 4 | ರಜಾ ಸೌಲಭ್ಯ :<br>ಗಳಿಕೆ ರಜೆ, ಪರಿವರ್ತಿತ ರಜೆ, ಸಾಂರ್ಧಭಿಕ ರಜೆ ಹೆರಿಗೆ ರಜೆ, ಗರ್ಭಪಾತ ರಜೆ. | ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ. |
| 5 | ಗಳಿಕೆ ರಜೆ ನಗದೀಕರಣ | ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ. |
| 6 | ಹೊರ ರಾಜ್ಯ ಭತ್ಯೆ : | ರಾಜ್ಯದ ಹೊರಗಿನ ಇತರೆ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬಂದ್ಭಿಗಳಿಗೆ ಮೂಲವೇತನದ ಶೇಕಡ.10ರಷ್ಟು ಇದೆ. ಹೊರ ರಾಜ್ಯಗಳಲ್ಲಿ ಕರ್ತವ್ಯ ನಿರ್ವಹಿಸುವ ಸಿಬಂದ್ಭಿಗಳಿಗೆ ಹುದ್ದೆಗನುಗುಣವಾಗಿ ದಿನವಹಿ ವಿಶೇಷ ಭತ್ಯೆ ನೀಡಲಾಗುತ್ತಿದೆ. |
| 7 | ಪ್ರಭಾರ ಭತ್ಯೆ :<br>ಪ್ರಭಾರ ಭತ್ಯೆಯ ದರವು ಸಿಬಂದ್ಭಿಯು ಅಧಿಕ ಪ್ರಭಾರ ಹೊಂದಿದ ಹುದ್ದೆಯ ವೇತನ ಶ್ರೇಣಿಯ ಕನಿಷ್ಠ ಮೂಲವೇತನದ ಶೇಕಡ 7.5 ರಷ್ಟಿದೆ. | ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ. |
| 8 | ಪ್ರಯಾಣ ಭತ್ಯೆ ಮತ್ತು ದಿನಭತ್ಯೆ :<br>ಸರ್ಕಾರಿ ಸಿಬಂದ್ಭಿಯು ತಮ್ಮ ಅಧಿಕೃತ ಕರ್ತವ್ಯ ನಿರ್ವಹಣೆಯ ಸಂದರ್ಭದಲ್ಲಿ ಕೈಗೊಳ್ಳುವ ಪ್ರಯಾಣ, ವಾಸ್ತವ್ಯ ಮತ್ತು ಆಹಾರ ಇತ್ಯಾದಿಗಳ ವೆಚ್ಚವನ್ನು ಭರಿಸಲು ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯನ್ನು ನೀಡಲಾಗುತ್ತದೆ. | ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ |
| 9 | ವಾಹನ ಭತ್ಯೆ (ಮೋಟಾರು ಕಾರು, ಮೋಟಾರು ಸೈಕಲ್, ಸ್ಕೂಟರ್, ಮೊಪೆಡ್, ಬೈಸಿಕಲ್)<br>ಸಮೂಹ ಎ : ರೂ.900/-<br>ಸಮೂಹ ಬಿ : ರೂ.900/-<br>ಸಮೂಹ ಸಿ : ರೂ.600/-<br>ಸಮೂಹ ಡಿ: ರೂ.300/- | ಅಧಿಕಾರಿಗಳಿಗೆ ಕೆಳಕಂಡಂತೆ ಮಾಸಿಕ ವಾಹನ ಭತ್ಯೆ ನೀಡಲಾಗುತ್ತಿದೆ:<br>ದರ್ಜೆ-2 = ರೂ.3000/-<br>ದರ್ಜೆ-1 ಕಿರಿಯ = ರೂ.5000/-<br>ದರ್ಜೆ-1 ಹಿರಿಯ ಮತ್ತು ಇಲಾಖಾ ಮುಖ್ಯಸ್ಥರಿಗೆ ನಿಗಮದ ವತಿಯಿಂದಲೇ ವಾಹನದ ವ್ಯವಸ್ಥೆ ಇರುತ್ತದೆ.<br>ಸಿಬಂದ್ಭಿಗಳಿಗೆ ಕರ್ತವ್ಯಕ್ಕೆ ಬಂದು ಹೋಗಲು ಉಚಿತ ಬಸ್ ಪಾಸ್ ಸೌಲಭ್ಯವಿರುವುದರಿಂದ ವಾಹನ ಭತ್ಯೆ ಸೌಲಭ್ಯ ಇರುವುದಿಲ್ಲ. |
| 10 | ಸಮವಸ್ತ್ರ ಭತ್ಯೆ :<br>ಎಲ್ಲಾ ಹಿರಿಯ ವಾಹನ ಚಾಲಕರು / ಚಾಲಕರು ಮಾಸಿಕ : ರೂ.400/-<br>ಎಲ್ಲಾ ಗ್ರೂಪ್- ಡಿ ಮತ್ತು ಸ್ಯಾನಿಟರಿ ಸಿಬಂದ್ಭಿ ಮಾಸಿಕ : ರೂ.400/- | ಸಮವಸ್ತ್ರಕ್ಕೆ ಅರ್ಹರಿರುವ ಎಲ್ಲಾ ವರ್ಗದ ನೌಕರರಿಗೆ ವಾರ್ಷಿಕ ಎರಡು ಜೊತೆ ಸಮವಸ್ತ್ರವನ್ನು ನಿಗಮದ ವತಿಯಿಂದ ಒದಗಿಸಲಾಗುತ್ತಿದೆ. ಜೊತೆಗೆ ಹೊಲಿಗೆ ಭತ್ಯೆ ಒಂದು ಜೊತೆಗೆ ರೂ.175/- ಮತ್ತು ಮಾಸಿಕ ವಾಷಿಂಗ್ ಭತ್ಯೆ ರೂ.35/- ಗಳನ್ನು ನೀಡಲಾಗುತ್ತಿದೆ. |
| 11 | ಬೆಚ್ಚನೆಯ ಉಡುಪು ಭತ್ಯೆ (2 ವರ್ಷಗಳಿಗೊಮ್ಮೆ) :<br>ಗ್ರೂಪ್- ಎ ಅಧಿಕಾರಿ : ರೂ.5000/-<br>ಗ್ರೂಪ್-ಬಿ ಅಧಿಕಾರಿ : ರೂ.4000/-<br>ಗ್ರೂಪ್-ಸಿ ಸಿಬಂದ್ಭಿ : ರೂ.4000/-<br>ಗ್ರೂಪ್-ಡಿ ಸಿಬಂದ್ಭಿ : ರೂ.3600/- | ಅಧಿಕಾರಿಗಳನ್ನು ಹೊರತುಪಡಿಸಿ ಇತರೇ ಎಲ್ಲಾ ವರ್ಗದ ನೌಕರರಿಗೆ ನಾಲ್ಕು ವರ್ಷಗಳಿಗೊಮ್ಮೆ ರೂ.600/- ಗಳನ್ನು ಜರ್ಸಿ ರೇನ್‌ಕೋಟ್ ಖರೀದಿ ಬಾಬ್ತು ನೀಡಲಾಗುತ್ತಿದೆ. |
| 12 | ವಿಶೇಷ ಭತ್ಯೆ:<br>ಹಲವಾರು ಇಲಾಖೆಗಳ ನಿರ್ದಿಷ್ಠ ಹುದ್ದೆಗಳಿಗೆ ಅವರು ನಿರ್ವಹಿಸುವ ಕಾರ್ಯ ನಿರ್ವಹಣೆಯ ಸ್ವರೂಪದ ಆಧಾರದ ಮೇಲೆ ವಿಶೇಷ ಭತ್ಯೆಯನ್ನು ನೀಡಲಾಗುತ್ತದೆ. | ಹುದ್ದೆವಾರು ನಿರ್ವಹಿಸುವ ಕರ್ತವ್ಯ ನಿರ್ವಹಣೆಯ ಸ್ವರೂಪದ ಆಧಾರದ ಮೇಲೆ ಬಾಟಾ ಮತ್ತು ಭತ್ಯೆಗಳನ್ನು ನೀಡಲಾಗುತ್ತಿದೆ. |

| | | |
|---|---|---|
| 13 | ಹಬ್ಬದ ಮುಂಗಡ :<br>ವಾರ್ಷಿಕ ರೂ.25,000/- | ವಾರ್ಷಿಕ: ರೂ.5,000/- ನೀಡಲಾಗುತ್ತಿದೆ. |
| 14 | ವಿಶೇಷ ಚೇತನ ಸಿಬಂಬ್ಬದಿಗೆ ಸೌಲಭ್ಯಗಳು:<br>1. ವಾಹನ ಭತ್ಯೆ: ವಿಶೇಷ ಚೇತನ ಸಿಬಂಬ್ಬದಿಯು ಕಛೇರಿಗೆ ಹೋಗಿ ಬರುವ ವೆಚ್ಚವನ್ನು ಭರಿಸಲು ಮೂಲವೇತನದ ಶೇಕಡ 6 ರಷ್ಟು ವಾಹನ ಭತ್ಯೆಯನ್ನು ನೀಡಲಾಗುತ್ತಿದೆ.<br>2.ವಿಶೇಷಚೇತನ ಮಕ್ಕಳ ಶೈಕ್ಷಣಿಕ ಭತ್ಯೆ: ಪ್ರಸ್ತುತ ವಿಶೇಷ ಚೇತನ ಮಕ್ಕಳಿಗೆ (ಇಬ್ಬರು ಮಕ್ಕಳಿಗೆ ಮಾತ್ರ) ಮಾಸಿಕ ರೂ.1000/-<br>3. ಯಾಂತ್ರೀಕೃತ ಮತ್ತು ಮೋಟಾರು ಚಾಲಿತ ವಾಹನಗಳ ಖರೀದಿಗೆ ಸಹಾಯಧನ: ವಾಹನದ ಬೆಲೆಯ ಶೇಕಡ 30 ರಷ್ಟು (ಗರಿಷ್ಠ ರೂ.40,000/-)<br>4. ಎಲೆಕ್ಟ್ರಾನಿಕ್ ಉಪಕರಣಗಳ ಸರಬರಾಜು: ಲ್ಯಾಪ್‌ಟಾಪ್, ಡಿಜಿಟಲ್ ಸಹಾಯಕಗಳು ಮತ್ತು ಇತರೆ ಉಪಕರಣಗಳೂ ಸೇರಿದಂತೆ ಹಲವಾರು ಎಲೆಕ್ಟ್ರಾನಿಕ್ ಉಪಕರಣಗಳ ಖರೀದಿಗಾಗಿ ರೂ.25,000/- ಗಳವರೆಗೆ ಬಡ್ಡಿರಹಿತ ಸಾಲ.<br>ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ. | ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ.<br><br>ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ.<br><br>ಯಾಂತ್ರೀಕೃತ ಮತ್ತು ಮೋಟಾರು ಚಾಲಿತ ವಾಹನಗಳ ಖರೀದಿಗೆ ವಾಹನದ ಬೆಲೆಯ ಶೇಕಡ 25 ರಷ್ಟು (ಗರಿಷ್ಠ ರೂ.25,000)<br><br>ಇರುವುದಿಲ್ಲ |
| 15 | ಶಿಶುಪಾಲನಾ ರಜೆ:<br>ಬುದ್ಧಿಮಾಂದ್ಯ/ಅಂಗವಿಕಲ ಮಕ್ಕಳನ್ನು ನೋಡಿಕೊಳ್ಳಲು ಮಹಿಳಾ ನೌಕರರಿಗೆ ಒಟ್ಟು 730 ದಿವಸಗಳ "ಶಿಶು ಪಾಲನಾ ರಜೆ"ಯನ್ನು ವೇತನಸಹಿತವಾಗಿ ಮಂಜೂರು ಮಾಡಲಾಗುತ್ತಿದೆ. | ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ. |
| 16 | ವರ್ಗಾವಣೆ ಅನುದಾನದ ದರಗಳು | ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ. |
| 17 | ವೈದ್ಯಕೀಯ ವೆಚ್ಚ ಮರುಪಾವತಿ ಸೌಲಭ್ಯ:<br>ಜ್ಯೋತಿ ಸಂಜೀವಿನಿ ಯೋಜನೆಯಡಿ ನಗದುರಹಿತ ವೈದ್ಯಕೀಯ ಚಿಕಿತ್ಸೆ ವ್ಯವಸ್ಥೆ. ಅಲ್ಲದೇ, ಮಾನ್ಯತೆ ಪಡೆದ ಖಾಸಗೀ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಲ್ಲಿ ಸಿಜಿಹೆಚ್‌ಎಸ್ 2014 ದರದಲ್ಲಿ ವೈದ್ಯಕೀಯ ವೆಚ್ಚ ಮರುಪಾವತಿ ಸೌಲಭ್ಯ. | ರಾಜ್ಯ ಸರ್ಕಾರದ ಮಾದರಿಯಲ್ಲಿ ನಿಗಮದ ನೌಕರರು ಚಿಕಿತ್ಸೆ ಪಡೆದ ಆಸ್ಪತ್ರೆಯ ದರ್ಜೆಗೆ ಅನುಗುಣವಾಗಿ ಅಂದರೆ, ಎನ್.ಎ.ಬಿ.ಹೆಚ್ ದರ್ಜೆಯ ಖಾಸಗಿ ಆಸ್ಪತ್ರೆ ಆಗಿದ್ದಲ್ಲಿ ಸಿ.ಜಿ.ಹೆಚ್.ಎಸ್-2014 ಎನ್.ಎ.ಬಿ.ಹೆಚ್ ದರದಲ್ಲಿ ಮತ್ತು ನಾನ್-ಎನ್.ಎ.ಬಿ.ಹೆಚ್ ದರ್ಜೆಯ ಆಸ್ಪತ್ರೆ ಆಗಿದ್ದಲ್ಲಿ ಸಿ.ಜಿ.ಹೆಚ್.ಎಸ್-2014 ನಾನ್-ಎನ್.ಎ.ಬಿ.ಹೆಚ್ ದರದಲ್ಲಿ ಲೆಕ್ಕ ಪರಿಶೀಲನೆ ಮಾಡಿ ಅರ್ಹ ಮೊತ್ತವನ್ನು ಮರುಪಾವತಿಸಲು ದಿನಾಂಕ.01.04.2021ರಿಂದ ಅನ್ವಯಿಸುವಂತೆ ಜಾರಿ ಮಾಡಿ ಆದೇಶ ಹೊರಡಿಸಲಾಗಿದೆ.<br><br>ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಸಹಯೋಗದೊಂದಿಗೆ 40 ವರ್ಷ ಮೇಲ್ಪಟ ಎಲ್ಲಾ ನಿಗಮದ ನೌಕರರು ಮತ್ತು ಅಧಿಕಾರಿಗಳಿಗೆ ಹೃದಯ ಸಂಬಂಧಿ ಹತ್ತು ವೈದ್ಯಕೀಯ ತಪಾಸಣೆಗಳನ್ನು ತಲಾ ರೂ. 1200/-ದರದಲ್ಲಿ ಮಾಡಿಸಲು ಐದು ವರ್ಷಗಳ ಅವಧಿಗೆ ಒಪಂಬ್ಬದವನ್ನು ಮಾಡಿಕೊಂಡು, ತಪಾಸಣೆಗೆ ನಿಯೋಜಿಸಲಾಗುತ್ತಿದೆ. |
| 18 | ಕನ್ನಡಕ ಖರೀದಿ ಮರುಪಾವತಿಯನ್ನು ರೂ.1000/- ಗಳನ್ನು ದರ್ಜೆ 3 ಮತ್ತು ದರ್ಜೆ 4 ನೌಕರರು ಮತ್ತು ಕುಟುಂಬದವರು ಸೇರಿದಂತೆ ಸೇವಾ ಅವಧಿಯಲ್ಲಿ ಮೂರು ಬಾರಿ ನೀಡಲು ಅವಕಾಶವಿದೆ. | ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ. |

| | | |
|---|---|---|
| 19. | ಸರ್ಕಾರಿ ನೌಕರರು ಮರಣ ಹೊಂದಿದ ಸಂದರ್ಭದಲ್ಲಿ ಶವ ಸಂಸ್ಕಾರ ಮತ್ತು ಕಾರ್ಯಗಳನ್ನು ಮಾಡಲು ಅವರ ಅವಲಂಬಿತರಿಗೆ ರೂ.25,000/-ಗಳನ್ನು ಎಕ್ಸ್‌ಗ್ರೇಷಿಯಾ ರೂಪದಲ್ಲಿ ನೀಡಲಾಗುತ್ತದೆ. | ನಿಗಮದಲ್ಲಿ ರೂ.10,000/- ಗಳನ್ನು ಎಕ್ಸ್‌ಗ್ರೇಷಿಯಾ ರೂಪದಲ್ಲಿ ನೀಡಲಾಗುತ್ತದೆ. |
| 20 | ನೌಕರರು ಸೇವೆಯಲ್ಲಿರುವಾಗ ನಿಧನರಾದ ಪಕ್ಷದಲ್ಲಿ ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರುವ ಒರ್ವ ಅವಲಂಬಿತರಿಗೆ ಅನುಕಂಪದ ಆಧಾರದ ನೇಮಕ ನೀಡಲಾಗುವುದು. | ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ |
| 21 | ಸ್ವಯಂ ನಿವೃತ್ತಿ ಯೋಜನೆ:<br>15 ವರ್ಷ ಸೇವೆ ಸಲ್ಲಿಸಿರುವ ಹಾಗೂ 50 ವರ್ಷ ಪೂರ್ಣಗೊಂಡಿರುವ ನೌಕರರು ಸ್ವಯಂ ನಿವೃತ್ತಿಯನ್ನು ಪಡೆಯಬಹುದಾಗಿದೆ.<br>ಹೆಚ್ಚುವರಿ ಆರ್ಥಿಕ ಸೌಲಭ್ಯಗಳು ಇರುವುದಿಲ್ಲ. ಆದರೆ, 5 ವರ್ಷ ಅಥವಾ ಅದಕ್ಕಿಂತಲೂ ಹೆಚ್ಚು ಉಳಿಕೆ ಸೇವೆ ಹೊಂದಿರುವ ಸಿಬ್ಬಂದಿಗಳಿಗೆ 5 ವರ್ಷ ಸೇವೆಯಲ್ಲಿ ಮುಂದುವರಿದಲ್ಲಿ ದೊರೆಯಬಹುದಾದ ಮೂಲವೇತನವನ್ನು ನಿವೃತ್ತಿ ಸೌಲಭ್ಯಗಳಿಗೆ ಪರಿಗಣಿಸಲಾಗುವುದು. | ಕನಿಷ್ಠ 10 ವರ್ಷ ನಿರಂತರ ಸೇವೆ ಸಲ್ಲಿಸಿರುವ ಮತ್ತು ಅಂಗವಿಕಲ ವ್ಯಕ್ತಿಗಳ ಕಾಯಿದೆ 1995 ಹಾಗೂ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಕಾಯಿದೆ 2016ರನ್ವಯ ಗುರುತಿಸಲ್ಪಟ್ಟ ಅಂಗವಿಕಲತೆಯಿಂದ ಶೇಕಡ 40 ಹಾಗೂ ಅದಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ಕುರಿತು ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರ ಹಾಜರುಪಡಿರುವ ಪ್ರಕರಣಗಳಿಗೆ ಉಳಿಕೆ ಸೇವಾಧಿಯ ಆಧಾರದ ಮೇಲೆ ಗರಿಷ್ಠ 10 ಲಕ್ಷಗಳ ಹೆಚ್ಚುವರಿ ಆರ್ಥಿಕ ಸೌಲಭ್ಯ ನೀಡುವ ಐಚ್ಛಿಕ ಸ್ವಯಂ-ನಿವೃತ್ತಿ ಯೋಜನೆ ಜಾರಿಯಲ್ಲಿದೆ.<br>ಅದೇ ರೀತಿ, ವೈದ್ಯಕೀಯವಾಗಿ ಅಸಮರ್ಥರಾಗಿ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಕಾಯಿದೆ 2016ರ ವ್ಯಾಪ್ತಿಗೊಳಪಡದೆ ಇರುವ ಇತರೆ ಖಾಯಿಲೆಗಳಿಂದ ಬಳಲುತ್ತಿರುವ ನೌಕರರಿಗೆ ಅನುಕೂಲವಾಗುವಂತೆ ರೂ.6.00 ಲಕ್ಷಗಳವರೆಗಿನ ಗರಿಷ್ಠ ಮೊತ್ತದ ಹೆಚ್ಚುವರಿ ಆರ್ಥಿಕ ಸೌಲಭ್ಯ ನೀಡುವ ಐಚ್ಛಿಕ ಸ್ವಯಂ-ನಿವೃತ್ತಿ ಯೋಜನೆ ಜಾರಿಯಲ್ಲಿದೆ. |
| 22 | ಎಲ್‌ಟಿಸಿ :<br>ಸೇವಾ ಅವಧಿಯಲ್ಲಿ ಎರಡು ಬಾರಿ ಕುಟುಂಬ ಸಮೇತ ಒಂದು ಸ್ಥಳಕ್ಕೆ ಹೋಗಿ ಬರಲು ನೀಡಲಾಗುತ್ತದೆ. (ಹುದ್ದೆಗನುಗುಣವಾಗಿ ಪ್ರಯಾಣ ದರವನ್ನು ಮರುಪಾವತಿ ಮಾಡಲಾಗುವುದು)<br><br>ಹೆಚ್‌ಟಿಸಿ:<br>ಈ ಸೌಲಭ್ಯವನ್ನು ಕುಟುಂಬ ಸಮೇತ ಸ್ವಂತ ಊರಿಗೆ ಹೋಗಿ ಬರಲು ಎರಡು ವರ್ಷಕ್ಕೊಮ್ಮೆ ನೀಡಲಾಗುತ್ತಿದೆ. | ನಾಲ್ಕು ವರ್ಷಕ್ಕೊಮ್ಮೆ ಕುಟುಂಬ ಸಮೇತ ಗರಿಷ್ಠ 4000 ಕಿಮೀ ವರೆಗೆ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ. (ಹುದ್ದೆಗನುಗುಣವಾಗಿ ಪ್ರಯಾಣ ದರವನ್ನು ಮರುಪಾವತಿ ಮಾಡಲಾಗುವುದು)<br><br>ನಿಗಮದ ನೌಕರರು ವಾರ್ಷಿಕ ಒಂದು ಸಾರಿ ಮಾತ್ರ (ಒಂದು ತಿಂಗಳ ಅವಧಿಯಲ್ಲಿ ಚಾಲ್ತಿಯಲ್ಲಿರುವಂತೆ) ಕುಟುಂಬ ಸಮೇತ ಪ್ರಯಾಣಿಸಲು ಉಚಿತ ಪಾಸ್ ನೀಡಲಾಗುವುದು (ಸಾಮಾನ್ಯ /ವೇತದೂತ/ ಕರ್ನಾಟಕ ಸಾರಿಗೆಗಳಲ್ಲಿ ಮಾತ್ರ). ಅಧಿಕಾರಿ ಮತ್ತು ಅವರ ಕುಟುಂಬದವರಿಗೆ ರಾಜಹಂಸ ಸಾರಿಗೆಗಳಲ್ಲಿ ಪ್ರಯಾಣಿಸಲು ಅನುಮತಿಸಲಾಗಿದೆ. |
| 23 | ಆಯ್ಕೆ ಕಾಲಿಕ ವೇತನ ಶ್ರೇಣಿ-(Time Bound Payscales) :<br><br>10 ಮತು 20 ವರ್ಷಗಳ ಸೇವೆ ಸಲ್ಲಿಸಿ ಯಾವುದೇ ಸೇವಾ ಮುಂಬಡ್ತಿ ಬರದೇ ಇರುವ ನೌಕರರಿಗೆ ಆಯ್ಕೆ ಕಾಲಿಕ ವೇತನ ಶ್ರೇಣಿಯಲ್ಲಿ ವೇತನ ಪಡೆಯುವರು.<br><br>ಒಂದೇ ಹುದ್ದೆಯಲ್ಲಿ 25 ಮತ್ತು 30 ವರ್ಷ ಸೇವೆ ಸಲ್ಲಿಸಿದಲ್ಲಿ ಹೆಚ್ಚುವರಿ ಒಂದು ವಾರ್ಷಿಕ ವೇತನ ಬಡ್ತಿ ಪಡೆಯುವರು. | 15 ವರ್ಷಗಳ ಸೇವೆ ಸಲ್ಲಿಸಿ ಯಾವುದೇ ಸೇವಾ ಮುಂಬಡ್ತಿ ಬರದೇ ಇರುವ ನೌಕರರಿಗೆ ಮಧ್ಯವರ್ತಿ (ಸೆಲೆಕ್ಷನ್ ಗ್ರೇಡ್) ವೇತನ ಶ್ರೇಣಿಯಲ್ಲಿ ವೇತನ ನೀಡಲಾಗುತ್ತಿದೆ.<br><br>ಸೇವಾ ಮುಂಬಡ್ತಿಗೆ ಅವಕಾಶ ಇಲ್ಲದೆ ಇರುವ ಹುದ್ದೆಗಳ ನೌಕರರನ್ನು 15 ವರ್ಷಗಳ ನಂತರ ಉನ್ನತ ವೇತನ ಶ್ರೇಣಿಯಲ್ಲಿ ತರಲಾಗಿದೆ.<br><br>25 ವರ್ಷ ಸೇವೆ ಸಲ್ಲಿಸಿರುವ ಚಾಲಕರಿಗೆ ಹಿರಿಯ ಚಾಲಕ ಹುದ್ದೆಗೆ ಪದೋನ್ನತಿ ನೀಡಿ ಅಧೀಕ್ಷಕ ಹುದ್ದೆಯ ವೇತನ ಶ್ರೇಣಿಯಲ್ಲಿ ವೇತನ ನೀಡಲಾಗುತ್ತದೆ. ಅದೇ ರೀತಿ, 25 ವರ್ಷ ಸೇವೆ ಸಲ್ಲಿಸಿರುವ ನಿರ್ವಾಹಕರಿಗೆ ಒಂದು ವಿಶೇಷ ವಾರ್ಷಿಕ ವೇತನ ಬಡ್ತಿಯನ್ನು ನೀಡಲಾಗುತ್ತದೆ. |

| | | |
|---|---|---|
| 24 | ಗುಂಪು ವಿಮಾ ಯೋಜನೆ:<br>ಹುದ್ದೆಗನುಗುಣವಾಗಿ ಮಾಸಿಕ ವಂತಿಕೆ ರೂ.180 ರಿಂದ ರೂ.480/- ವರೆಗೆ ಕಡಿತಗೊಳಿಸಲಾಗುತ್ತದೆ.<br>ಸದಸ್ಯ ನೌಕರರು ಮೃತಪಟ್ಟಲ್ಲಿ ಕನಿಷ್ಠ ರೂ.1,20,000 ರಿಂದ ರೂ.4,80,000/- ರ ವಿಮಾ ಪರಿಹಾರ ನೀಡಲಾಗುವುದು.<br>ಸದಸ್ಯ ನೌಕರರು ಸೇವೆಯಿಂದ ನಿವೃತ್ತಿ ಹೊಂದಿದಲ್ಲಿ ಅವರ ವೇತನದಿಂದ ಕಡಿತವಾದ ವಂತಿಕೆ ಹಣವನ್ನು ನಿಗದಿತ ಬಡ್ಡಿ ಸೇರಿಸಿ ನೀಡಲಾಗುವುದು. | ನಿಗಮದ ಆಂತರಿಕ ವಿಮಾ ಯೋಜನೆಯ ಸದಸ್ಯ ನೌಕರರು ಸೇವೆಯಲ್ಲಿರುವಾಗ ಅಕಾಲಿಕ ಮರಣ ಹೊಂದಿದ ಪಕ್ಷದಲ್ಲಿ ನಿಯಮಾನುಸಾರ ಅರ್ಹ ಉಪದನ, ಭವಿಷ್ಯನಿಧಿ, ಡಿಆರ್‌ಬಿಎಫ್ ಇತ್ಯಾದಿಗಳ ಜೊತೆಗೆ ಹೆಚ್ಚುವರಿಯಾಗಿ ನೌಕರರ ಕುಟುಂಬ ಕಲ್ಯಾಣ ಯೋಜನೆಯಡಿ ರೂ: 10.00 ಲಕ್ಷಗಳ ಗರಿಷ್ಠ ಮೊತ್ತದ ಪರಿಹಾರವನ್ನು ಅವರ ಅವಲಂಬಿತರಿಗೆ ನೀಡುವ ಮಹತ್ವದ ಯೋಜನೆ ಜಾರಿಯಲ್ಲಿರುತ್ತದೆ.<br>ಅಲ್ಲದೇ, ಅಪಘಾತ ಪರಿಹಾರ ಯೋಜನೆಯನ್ನು (ಕರ್ತವ್ಯ ನಿರತ ಮತ್ತು ಖಾಸಗೀ ಅಪಘಾತ ಸೇರಿದಂತೆ) ಜಾರಿಗೊಳಿಸಿ ಅಪಘಾತದಿಂದ ಮೃತಪಟ್ಟನೌಕರರ ಅವಲಂಬಿತರಿಗೆ ರೂ. 1.00 ಕೋಟಿಗಳ ಪರಿಹಾರ ಮೊತ್ತವನ್ನು ವಿತರಿಸಲಾಗುತ್ತಿದೆ.<br><br>ಡಿಆರ್‌ಬಿಎಫ್ ನಿಧಿಯಡಿ ನೌಕರರಿಂದ ಮಾಸಿಕ ರೂ.100.00 ಅನ್ನು ಕಡಿತಗೊಳಿಸಲಾಗುತ್ತಿದೆ.<br>ಸದಸ್ಯ ನೌಕರರು ಮೃತಪಟ್ಟಲ್ಲಿ ವೇತನದಿಂದ ಕಡಿತವಾದ ವಂತಿಕೆ ಹಣವನ್ನು ನಿಗದಿತ ಬಡ್ಡಿ ಮತ್ತು ಹೆಚ್ಚುವರಿ ರೂ.1,50,000 ಪರಿಹಾರ ಸಮೇತ ನೀಡಲಾಗುವುದು.<br>ಸದಸ್ಯ ನೌಕರರು ಸೇವೆಯಿಂದ ನಿವೃತ್ತಿ ಹೊಂದಿದಲ್ಲಿ ಅವರ ವೇತನದಿಂದ ಕಡಿತವಾದ ವಂತಿಕೆ ಹಣವನ್ನು ನಿಗದಿತ ಬಡ್ಡಿ ಸೇರಿಸಿ ನೀಡಲಾಗುವುದು. |
| 25 | ಉಪದನ :<br>ಸರ್ಕಾರದಲ್ಲಿ ಉಪದನ ಕಾಯಿದೆಯನ್ವಯ ಗರಿಷ್ಠ ರೂ:20.00ಲಕ್ಷಗಳ ಉಪದನವನ್ನು ನೀಡಲಾಗುತ್ತಿದೆ. | ನಿಗಮದ ಉಪದನ ನಿಯಮಾವಳಿ ಅಥವಾ ಉಪದನ ಕಾಯ್ದೆ (ಕೈಗಾರಿಕಾ ಒಪ್ಪಂದದ ಕ್ಲಾಸ್ ನಂತೆ) ಇವೆರಡರ ಪೈಕಿ ನೌಕರರಿಗೆ ಯಾವುದು ಅನುಕೂಲವಾಗುತ್ತದೆಯೋ ಆ ಮೊತ್ತವನ್ನು ಯಾವುದೇ ಮಿತಿಯ ನಿರ್ಬಂಧವಿಲ್ಲದೇ ನೀಡಲಾಗುತ್ತಿದೆ.<br>2002 ರ ನಂತರ ಸೇವೆಗೆ ಸೇರಿದ ನೌಕರರು ಉಪಧನ ಕಾಯಿದೆಯನ್ವಯ ಮಾತ್ರ ಉಪದಾನ ಪಡೆಯಲು ಅರ್ಹರು. |
| 26 | ಪಿಂಚಣಿ :<br>ಸರ್ಕಾರಿ ನೌಕರರು ನಿವೃತ್ತಿ ವೇತನಕ್ಕೆ (Pension) ಅರ್ಹರಿರುತ್ತಾರೆ.<br>2006 ರ ನಂತರದಲ್ಲಿ ಸೇವೆಗೆ ಸೇರಿದ ನೌಕರರು ಎನ್‌ಪಿಎಸ್ ಯೋಜನೆಯಡಿ ಪಿಂಚಣಿ ಪಡೆಯಲು ಅರ್ಹರಿರುತ್ತಾರೆ. | ಸಾರಿಗೆ ನೌಕರರು ಭವಿಷ್ಯ ನಿಧಿ (Provident Fund) ಕಾಯಿದೆಯಡಿ ಬರುತ್ತಾರೆ ಮತ್ತು ಅದರನ್ವಯ ನೌಕರರ ವೇತನದ (Basic + DA) ಮೇಲೆ ಶೇ 12ರಷ್ಟು ಕಡಿತ ಮಾಡಿ ನೌಕರರ ಭವಿಷ್ಯ ನಿಧಿ ಖಾತೆಗೆ ಪಾವತಿಸಲಾಗುತ್ತದೆ. ಜೊತೆಗೆ, ಆಡಳಿತ ವರ್ಗದ ಪರವಾಗಿ ಸಹ ಶೇ.12 ಅನ್ನು ಪಾವತಿಸಲಾಗುತ್ತದೆ. ಆಡಳಿತ ವರ್ಗದ ಶೇ.12 ರಲ್ಲಿ ಶೇ.8.33 ರಷ್ಟನ್ನು ಹಾಲಿ ರೂ.1250 ಕ್ಕೆ ಸೀಮಿತಗೊಳಿಸಿ ನೌಕರರ ಪಿಂಚಣಿ ಸಲುವಾಗಿ ಪಾವತಿಸಲಾಗುತ್ತದೆ. |
| 27 | ಭವಿಷ್ಯ ನಿಧಿ: ಇರುವುದಿಲ್ಲ | ಸಾರಿಗೆ ನೌಕರರು ಭವಿಷ್ಯ ನಿಧಿ (Provident Fund) ಕಾಯಿದೆಯಡಿ ಬರುತ್ತಾರೆ. ನಿಗಮದಲ್ಲಿ ಭವಿಷ್ಯನಿಧಿ ಟ್ರಸ್ಟ್ ಅಸ್ತಿತ್ವದಲ್ಲಿದ್ದು, ನೌಕರರ ವೇತನದ (Basic + DA) ಮೇಲೆ ಶೇ 12ರಷ್ಟು ಕಡಿತ ಮಾಡಿ ನೌಕರರ ಭವಿಷ್ಯ ನಿಧಿ ಖಾತೆಗೆ ಪಾವತಿಸಲಾಗುತ್ತದೆ. ಜೊತೆಗೆ, ಆಡಳಿತ ವರ್ಗದ ಪರವಾಗಿ ಶೇ 12 ಅನ್ನು (ಪಿಂಚಣಿ ಮೊತ್ತ ರೂ.1250 ಹೊರತುಪಡಿಸಿ) ಪಾವತಿಸಲಾಗುತ್ತದೆ. |

| | | |
|---|---|---|
| 28 | ಮಹಿಳಾ ನೌಕರರಿಗೆ ಇಡೀ ಸೇವಾವಧಿಯಲ್ಲಿ ಗರಿಷ್ಠ ಆರು ತಿಂಗಳವರೆಗೆ ಅಂದರೆ 180 ದಿನಗಳ "ಶಿಶುಪಾಲನಾ ರಜೆ"ಯನ್ನು ಮಂಜೂರು ಮಾಡುವ ಸಂಬಂಧ ದಿನಾಂಕ.18.01.2022 ರಿಂದ ಜಾರಿಗೆ ಬರುವಂತೆ ಆದೇಶ ಹೊರಡಿಸಲಾಗಿದೆ. | ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ. |

ಉಪ ಮುಖ್ಯ ಸಂಖ್ಯಾಧಿಕಾರಿ,
ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ,
ಬೆಂಗಳೂರು.